**ಭಾರತೀಯ ಜನತಾ ಪಾರ್ಟಿ**

(ಕೇಂದ್ರ ಕಚೇರಿ)

11, ಅಶೋಕ ರಸ್ತೆ, ನವದೆಹಲಿ–110001

ದೂರವಾಣಿ ಸಂಖ್ಯೆ: 23005700;ಫ್ಯಾಕ್ಸ್: 23005787

ದಿನಾಂಕ: ಮಾರ್ಚ್ 11, 2014

**ಸಂಸದ ಹಾಗೂ ಭಾಜಪದ ರಾಜ್ಯಸಭಾ ವಿರೋಧ ಪಕ್ಷದ ಉಪನಾಯಕ**
**ಶ್ರೀ ರವಿ ಶಂಕರ್ ಪ್ರಸಾದ್ ಅವರ ಹೇಳಿಕೆ**

## ಅವರದೇ ಸರ್ಕಾರ ಸೃಷ್ಟಿಸಿರುವ ಸಮಸ್ಯೆಗಳಿಗೆ ಉತ್ತರ ದೊರೆಯದೆ ರಾಹುಲ್ ಗಾಂಧಿ ಇತಿಹಾಸವನ್ನೇ ತಿರುಚುತ್ತಿದ್ದಾರೆ

ವರ್ತಮಾನದ ಪ್ರಮುಖ ವಿಚಾರಗಳಾದ ಹೆಚ್ಚುತ್ತಿರುವ ನಿರುದ್ಯೋಗ ಸಮಸ್ಯೆ, ದೇಶದ ವೃದ್ಧಿ ದರ ಸರ್ವಕಾಲಿಕ ಕನಿಷ್ಠ ಪ್ರಮಾಣ ಶೇಕಡ 4.7ನ್ನು ತಲುಪಿರುವ ವಿಚಾರ, ಬೆಲೆ ಹೆಚ್ಚಳ, ನಾರುತ್ತಿರುವ ಭ್ರಷ್ಟಾಚಾರ, ಸಾರ್ವಜನಿಕ ಹಣದ ಲೂಟಿ, ದೇಶದಲ್ಲಿ ಹೆಚ್ಚುತ್ತಿರುವ ಅಭದ್ರತೆಯ ವಾತಾವರಣ ಹಾಗೂ ಭಾರತದ ವರ್ಚಸ್ಸಿಗೆ ಧಕ್ಕೆ ಉಂಟುಮಾಡುವ ಹಲವಾರು ಪಿಡುಗುಗಳು ದೇಶದಲ್ಲಿ ಹತಾಷೆಯ ಪರಿಸ್ಥಿತಿಯನ್ನು ಆಧರಿಸಿ 2014ರ ಚುನಾವಣೆಯ ಹಣಾಹಣಿ ನಡೆಯಲಿದೆ. ಭಾರತದ ನಾಗರಿಕರು ಬದಲಾವಣೆಯನ್ನು ಬಯಸಿದ್ದಾರೆ. ಇವೆಲ್ಲಕ್ಕೂ ಉತ್ತರವನ್ನು ರಾಹುಲ್ ಗಾಂಧಿ ಅವರಿಂದ ಬಯಸುತ್ತಿರುವ ದೇಶದ ಜನತೆ ನ್ಯಾಯೋಚಿತ ಪ್ರಶ್ನೆಯನ್ನು ಕೇಳುತ್ತಿದೆ. ಉತ್ತರ ಕಾಣದ ಅವರು, ಜನರ ಗಮನ ಬೇರೆಡೆಗೆ ವಿಚಲಿತಗೊಳ್ಳಲು ಮಹಾತ್ಮ ಗಾಂಧಿ ಅವರ ಹತ್ಯೆಯ ಹುಸಿ ಹಾಗೂ ಕುಚೋದ್ಯಪೂರ್ಣ ಆರೋಪವನ್ನು ಆರ್‌ಎಸ್‌ಎಸ್ ಮೇಲೆ ಹೊರೆಸಿದ್ದಾರೆ. ಈ ಆಪಾದನೆಗಳಲ್ಲಿ ಹುರುಳಿಲ್ಲವೆಂದು ಈಗಾಗಲೆ ನ್ಯಾಯಮೂರ್ತಿ ಕಪೂರ್ ಆಯೋಗ ಸೇರಿದಂತೆ ಹಲವಾರು ತನಿಖಾ ಆಯೋಗಗಳು ತಿಳಿಸಿವೆ. ಶ್ರೀ ರಾಹುಲ್ ಗಾಂಧಿ ಅವರಿಗೆ ಇತಿಹಾಸದ ಜ್ಞಾನವೂ ಇಲ್ಲ, ಅವರ ಭಾಷಣ ಬರಹಗಾರರಿಗೆ ಯೋಗ್ಯ ತಿಳುವಳಿಕೆಯೂ ಇಲ್ಲ.

ಮಹಾತ್ಮ ಗಾಂಧಿ ಅವರ ಮೊಮ್ಮಗ ಶ್ರೀ ರಾಜ್ ಮೋಹನ್ ಗಾಂಧಿ ಅವರು "ಪಟೇಲ್–ಒಂದು ಜೀವನ" ಎಂಬ ಶೀರ್ಷಿಕೆಯ ಸರ್ದಾರ್ ಪಟೇಲ್ ಆತ್ಮಚರಿತ್ರೆಯನ್ನು ಬರೆದಿದ್ದಾರೆ. ಈ ಪುಸ್ತಕದ ಪುಟ 472ರಲ್ಲಿ ಸರ್ದಾರ್ ಪಟೇಲ್ ಅವರು ಜವಹರ್ ಲಾಲ್ ನೆಹರು ಅವರಿಗೆ 27.02.1948ರಂದು ಬರೆದ ಪತ್ರದ ಪ್ರಸ್ತಾಪವನ್ನು ಲೇಖಕರು ಮಾಡುತ್ತಾರೆ. ಆ ಪತ್ರದ ಕೆಲವು ಸಾಲುಗಳನ್ನು ಕೆಳಗೆ ಪ್ರಕಟಿಸಲಾಗಿದೆ:

*"ಪಟೇಲ್ ಅವರು ನೆಹರು ಅವರಿಗೆ 27.2.48ರಂದು ಬರೆದ ಪತ್ರ: ಬಾಪು ಹತ್ಯೆ ಪ್ರಕರಣದ ತನಿಖೆಯ ಪ್ರಗತಿಯನ್ನು ನಾನು ಸರಿಸುಮಾರು ಪ್ರತಿದಿವಸ ಪರಿಶೀಲಿಸುತ್ತಿದ್ದೇನೆ. ಈ ವಿಚಾರದ ಚರ್ಚೆಗೆ ಸಂಜೆಯ ಅವಧಿಯ ಬಹುಪಾಲನ್ನು ನಾನು ಸಂಜೀವಿ (ಗುಪ್ತಚರ ಇಲಾಖೆ ಮುಖ್ಯಸ್ಥ ಹಾಗೂ ಪೋಲೀಸ್ ವರಿಷ್ಠಾಧಿಕಾರಿ, ದೆಹಲಿ) ಅವರೊಂದಿಗೆ ಕಳೆಯುತ್ತಿದ್ದು ದಿನದ ಪ್ರಗತಿಯನ್ನು ಪರಿಶೀಲಿಸಿ ಯಾವುದೇ ಅಂಶಗಳು ಉದ್ಭವಿಸಿದಾಗ, ಸೂಕ್ತ ನಿರ್ದೇಶನ ನೀಡುತ್ತಿದ್ದೇನೆ.*

*ಎಲ್ಲಾ ಆರೋಪಿಗಳು ದೀರ್ಘ ಹಾಗೂ ವಿವರವಾದ ಹೇಳಿಕೆಗಳನ್ನು ನೀಡಿದ್ದಾರೆ... ಈ ಎಲ್ಲಾ ಹೇಳಿಕೆಗಳಿಂದ ಸ್ಪಷ್ಟವಾಗಿ ಹೊರಹೊಮ್ಮುವ ವಿಚಾರವೆಂದರೆ ಆರ್‌ಎಸ್‌ಎಸ್ ಈ ಪ್ರಕರಣದಲ್ಲಿ ಭಾಗಿಯಾಗಿಲ್ಲ. ಈ ಪಿತೂರಿಯನ್ನು (ರೂಪಿಸಿದ್ದು) ಹಾಗೂ ಕಾರ್ಯಗತಗೊಳಿಸಿದ್ದು ಹಿಂದು ಮಹಾಸಭಾದಲ್ಲಿರುವ ಧರ್ಮಾಂಧ ಘಟಕದ ಸದಸ್ಯರು."*

ಆದ್ದರಿಂದ, ಆರ್‌ಎಸ್‌ಎಸ್ ಪ್ರಕರಣದಲ್ಲೆಲ್ಲೂ ಶಾಮೀಲಾಗಿಲ್ಲ ಎಂದು ಯೋಗ್ಯ ಪೋಲೀಸ್ ವಿಚಾರಣೆ ಆಧರಿಸಿ ಸರ್ದಾರ್ ಪಟೇಲ್ ಸ್ಪಷ್ಟಪಡಿಸಿದ್ದರು. ಮುಂಬರುವ ಚುನಾವಣೆಯಲ್ಲಿ ಜನಬೆಂಬಲ ಕಳೆದುಕೊಂಡ ಕಾಂಗ್ರೆಸ್ ಪಕ್ಷದ ಉತ್ಸಾಹ ಕುಂದಿದೆ, ಅದು ಹತಾಶವಾಗಿದೆ, ಬೇಸತ್ತಿದೆ. ಈ ಚುನಾವಣೆಯಲ್ಲಿ ಆ ಪಕ್ಷ ಹಿಂದೆಂದೂ ಕಾಣದ ಹೀನಾಯ ಸೋಲನ್ನು ಅನುಭವಿಸುವ ಸೂಚನೆಗಳು ಕಾಣುತ್ತಿದೆ. ಈ ಹಿನ್ನಲೆಯಲ್ಲಿ ಹುಸಿ ಹಾಗೂ ಕುಚೋದ್ಯದಿಂದ ಕೂಡಿದ ಅಪಪ್ರಚಾರದಲ್ಲಿ ತೊಡಗಿರುವ ಪಕ್ಷವನ್ನು ಮತದಾರರು ಖಂಡಿತ ತಿರಸ್ಕರಿಸಲಿದ್ದಾರೆ.

ನೆಹರು–ಇಂದಿರಾ ಗಾಂಧಿಯವರ ದೀರ್ಘ ಆಡಳಿತಾವಧಿಯಲ್ಲಿ ಸರ್ದಾರ್ ಪಟೇಲ್ ಹಾಗೂ ಮೌಲಾನಾ ಅಜಾದ್ ಅವರಿಗೆ ಭಾರತ ರತ್ನವನ್ನೇಕೆ ಘೋಷಿಸಲಿಲ್ಲ?

ರಾಹುಲ್ ಗಾಂಧಿ ಹಾಗೂ ಕಾಂಗ್ರೆಸಿಗರು ಸತತವಾಗಿ ಐತಿಹಾಸಿಕ ಅಸತ್ಯಗಳನ್ನು ನುಡಿಯುತ್ತಿರುವಾಗ, ಐತಿಹಾಸಿಕ ಸತ್ಯ ಸಂಗತಿಯೊಂದರ ಕುರಿತು ಕಾಂಗ್ರೆಸ್ ಪಾರ್ಟಿ ಹಾಗೂ ನಿರ್ದಿಷ್ಟವಾಗಿ ರಾಹುಲ್ ಗಾಂಧಿ ಅವರಿಂದ ಸೂಕ್ತ ಉತ್ತರ ಬಯಸುವ ಸಮಯ ಬಂದಿದೆ. ದೇಶದ ಸೇವೆಯಲ್ಲಿ ತಮ್ಮ ಜೀವನ ಸಮರ್ಪಣೆ ಮಾಡಿದ ಮಹಾನ್ ಭಾರತೀಯರಾದ ಸರ್ದಾರ್ ಪಟೇಲ್ ಹಾಗೂ ಮೌಲಾನಾ ಅಜಾದ್ ಅವರು ಭಾರತ ರತ್ನ ಗೌರವಕ್ಕೆ ಪಾತ್ರರಾಗುವ ಎಲ್ಲಾ ಯೋಗ್ಯತೆ ಇದೆ. ಸರ್ದಾರ್ ಪಟೇಲ್ 1950ರಲ್ಲಿ ಮರಣ ಹೊಂದಿದರು ಹಾಗೂ ಮೌಲಾನಾ ಅಜಾದ್ 1959ರಲ್ಲಿ ಅಗಲಿದರು. ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರ ಜವಹರ್ ಲಾಲ್ ನೆಹರು 17 ವರ್ಷಗಳು ಪ್ರಧಾನ ಮಂತ್ರಿಗಳಾಗಿದ್ದರು, ಇಂದಿರಾ ಗಾಂಧಿ 16 ವರ್ಷ ಹಾಗೂ ರಾಜೀವ್ ಗಾಂಧಿ ಐದು ವರ್ಷಗಳು. ಈ 38 ವರ್ಷಗಳ ದೀರ್ಘಾವಧಿಯಲ್ಲಿ ಶ್ರೀ ನೆಹರು ಹಾಗೂ ಶ್ರೀಮತಿ ಇಂದಿರಾ ಗಾಂಧಿ ಅವರೂ ಸೇರಿದಂತೆ ಹಲವಾರು ಅರ್ಹ ರಾಷ್ಟ್ರೀಯ ನಾಯಕರಿಗೆ ಭಾರತ ರತ್ನ ನೀಡಲಾಗಿದೆ.

ಆದರೆ ಭಾರತದ ಮಹಾನ್ ನಾಯಕರಾದ ಸರ್ದಾರ್ ಪಟೇಲ್ ಹಾಗೂ ಮೌಲಾನಾ ಅಜಾದ್ ಭಾರತ ರತ್ನ ಪಡೆಯಲು ಯೋಗ್ಯರಾಗಿದ್ದಾರೆ ಎಂದು ನೆಹರು–ಇಂದಿರ ಅವರ ದೀರ್ಘಾವಧಿಯ ಸರ್ಕಾರಗಳು ಯಾಕೆ ಪರಿಗಣಿಸಲಿಲ್ಲ ಎಂದು ದೇಶ ತಿಳಿಯಬಯಸುತ್ತದೆ. ಕಡೆಗೆ ಶ್ರೀ ನರಸಿಂಹ ರಾವ್ ಅವರ ಸರ್ಕಾರ 1991ರಲ್ಲಿ ಸರ್ದಾರ್ ಪಟೇಲ್ ಅವರಿಗೆ ಮತ್ತು 1992ರಲ್ಲಿ ಶ್ರೀ ಅಜಾದ್ ಅವರಿಗೆ ಭಾರತ ರತ್ನ ನೀಡಿ ಗೌರವಿಸಿತು. ಶ್ರೀ ರಾವ್ ಅವರು ಕುಟುಂಬದ ಸದಸ್ಯರಲ್ಲ ಹಾಗೂ ಕಾಂಗ್ರೆಸಿಗರು ಅವರ ಕುರಿತು ಮಾತನಾಡುವುದು ವಿರಳ. ಸರ್ದಾರ್ ಪಟೇಲ್ ಹಾಗೂ ಮೌಲಾನ ಅಜಾದ್ ವಿಚಾರದಲ್ಲಿ ತಾರತಮ್ಯವೇಕೆ ಎಂದು ಭಾಜಪ ಶ್ರೀ ರಾಹುಲ್ ಗಾಂಧಿ ಅವರ ಉತ್ತರ ಬಯಸುತ್ತದೆ? ಸ್ವಾಭಾವಿಕವಾಗಿ ಇಂದಿನ ಕಾಂಗ್ರೆಸ್ ಪಕ್ಷಕ್ಕೆ ಕೇವಲ ಕುಟುಂಬದ ಘನತೆ ಹಾಗೂ ಗೌರವ ಮುಖ್ಯವೆನಿಸಿದೆ.

(ಇಆರ್. ಅರುಣ್ ಕುಮಾರ್ ಜೈನ್)
ಕಚೇರಿ ಕಾರ್ಯದರ್ಶಿ